| | | |
|---|---|---|
| Date | : | 12/Nov/2016 |
| Publication | : | Prajavani |
| Edition | : | Bengaluru |
| Media Type | : | Print |

ಪ್ರಜಾವಾಣಿ

Date: 12 Nov 2016

# ಈ ಆಸ್ಪತ್ರೆಯಲ್ಲಿ ₹10ಕ್ಕೆ ಚಿಕಿತ್ಸೆ

**ಹುಸ್ಕೂರಿನಲ್ಲಿ ಬಯೋಕಾನ್ ಫೌಂಡೇಷನ್ 12 ವರ್ಷಗಳಿಂದ ನಡೆಸುತ್ತಿರುವ ಕ್ಲಿನಿಕ್‌ನಲ್ಲಿ ಹತ್ತು ರೂಪಾಯಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಇಲ್ಲಿ ಎಲೆಕ್ಟ್ರಾನಿಕ್ ಮೆಡಿಕಲ್ ರೆಕಾರ್ಡಿಂಗ್ ವ್ಯವಸ್ಥೆ ಮೂಲಕ ರೋಗಿಯ ಮಾಹಿತಿಯನ್ನು ದಾಖಲಿಸಿಕೊಳ್ಳುತ್ತಿರುವುದು ವಿಶೇಷ**

ರಮೇಶ ಕೆ.

**ಅಂಗೈಲಿ ಆರೋಗ್ಯ**

ತಾಯಿಯೊಬ್ಬಳು ತನ್ನ ಮಗುವನ್ನು ಮಡಿಲಿನಲ್ಲಿ ಮಲಗಿಸಿಕೊಂಡು ಆಸ್ಪತ್ರೆ ಹೊರಗೆ ಕುಳಿತಿದ್ದಳು. ಊರುಗೋಲಿನ ಸಹಾಯದಿಂದ ತಲೆ ಅಲುಗಾಡಿಸುತ್ತಾ ಬಂದ ಹಿರಿಯರೊಬ್ಬರು ಆಸ್ಪತ್ರೆಯ ಸಿಬ್ಬಂದಿ ಸಹಾಯದಿಂದ ಸ್ಟೂಲಿನ ಮೇಲೆ ಕುಳಿತರು.

ವೈದ್ಯರನ್ನು ಭೇಟಿಯಾಗುವುದಕ್ಕೂ ಮುಂಚೆಯೇ ರೋಗಿಯ ಫೋಟೊ ತೆಗೆದು, ತೂಕ, ರಕ್ತದೊತ್ತಡ, ರಕ್ತದಲ್ಲಿ ಸಕ್ಕರೆ ಪ್ರಮಾಣ ಪರೀಕ್ಷೆ ಮಾಡಲಾಗುತ್ತಿತ್ತು. ಇಲ್ಲಿ ದಾಖಲಾದ ವರದಿ ಈ-ಲಾಜ್ (ಎಲೆಕ್ಟ್ರಾನಿಕ್ ಮೆಡಿಕಲ್ ರೆಕಾರ್ಡಿಂಗ್) ವ್ಯವಸ್ಥೆ ಮೂಲಕ ಸೀದಾ ವೈದ್ಯರ ಕೊಠಡಿಗೆ ರವಾನೆಗುತ್ತಿತ್ತು.

ಕ್ಲಿನಿಕ್‌ನ ಹೊರಾಂಗಣದಲ್ಲಿ ನಡೆಸಿದ ವರದಿ ಆಧರಿಸಿ ವೈದ್ಯರು ಆ ರೋಗಿಯ ನ್ನು ಪರೀಕ್ಷಿಸುತ್ತಿದ್ದರು. ಇಷ್ಟೆಲ್ಲಾ ಪರೀಕ್ಷೆಗೆ ಇಲ್ಲಿ ಕೇವಲ ₹10 ರೂಪಾಯಿ ಚಾರ್ಜ್ ಮಾಡುತ್ತಾರೆ.

ಎಲೆಕ್ಟ್ರಾನಿಕ್ ಸಿಟಿಗೆ ಹತ್ತಿರವಿರುವ ಹುಸ್ಕೂರು ಗ್ರಾಮದಲ್ಲಿ ಬಯೋಕಾನ್ ಫೌಂಡೇಷನ್, ಆರೋಗ್ಯ ರಕ್ಷಾ ಯೋಜನೆಯಡಿ ನಡೆಸುತ್ತಿರುವ ಕ್ಲಿನಿಕ್‌ನಲ್ಲಿ ಕಂಡು ಬಂದ ದೃಶ್ಯವಿದು.

ವೈದ್ಯಕೀಯ ಸೌಲಭ್ಯ ಕೊರತೆಯಿರುವ ಗ್ರಾಮವನ್ನು ಗುರುತಿಸಿ, ಬಯೋಕಾನ್ ಫೌಂಡೇಷನ್ ಆರಂಭಿಸಿದ ಕ್ಲಿನಿಕ್ ಇದಾಗಿದೆ. ಇಲ್ಲಿಗೆ ಬರುವ ರೋಗಿಗಳು ಹತ್ತು ರೂಪಾಯಿ ಕೊಟ್ಟು ಹೆಸರು ನೋಂದಾಯಿಸಿಕೊಳ್ಳುತ್ತಾರೆ. ನಂತರದ ಕೆಲಸ ಮೇಲೆ ತಿಳಿಸಿದಂತೆ ಸಾಗುತ್ತದೆ.

### ಈ-ಲಾಜ್ ತಂತ್ರಜ್ಞಾನ ಬಳಕೆ

ಪದೇ ಪದೇ ಬರುವ ರೋಗಿಗಳ ಇತಿಹಾಸ ತಿಳಿಯಲು ಹಾಗೂ ಬಯೋಕಾನ್ ಫೌಂಡೇಷನ್‌ನ ಮುಖ್ಯ ಕಚೇರಿಯಲ್ಲಿ ದಾಖಲೆ ಸಂಗ್ರಹಿಸಲು ನೆರವಾಗುವ ಉದ್ದೇಶದಿಂದ ಈ-ಲಾಜ್ ವ್ಯವಸ್ಥೆ ಮಾಡಲಾಗಿದೆ. ವೈದ್ಯರಿಗೂ ಇದರಿಂದ ಮುಂದಿನ ತಪಾಸಣೆಗೆ ನೆರವಾಗುತ್ತದೆ.

ಈ ವ್ಯವಸ್ಥೆಯಿಂದಾಗಿ ಯಾವ ರೋಗಿಗಳು ಬಂದಿದ್ದಾರೆ, ಆ ಕಾಯಿಲೆಗೆ ಎಂಥ ಔಷಧ, ಎಷ್ಟು ಪ್ರಮಾಣದಲ್ಲಿ ತರಬೇಕು ಎಂಬುದಕ್ಕೆ ಅನುಕೂಲವಾಗುತ್ತದೆ.

ಈ-ಲಾಜ್ ವ್ಯವಸ್ಥೆಯನ್ನು ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಅಳವಡಿಸುವ ಸಂಬಂಧ ಫೌಂಡೇಷನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸರ್ಕಾರ ಮುಂದಾಗಿದೆಯಂತೆ.

'ನಮ್ಮ ಸಿಬ್ಬಂದಿ ಗ್ರಾಮದ ಪ್ರತಿ ಮನೆಮನೆಗೂ ಹೋಗಿ, ಕುಟುಂಬ ಸದಸ್ಯರ ಸಂಖ್ಯೆ, ಆರೋಗ್ಯ ಸಮಸ್ಯೆಯ ಬಗ್ಗೆ ವಿಚಾರಿಸಿ ದಾಖಲೆ ಸಂಗ್ರಹಿಸುತ್ತಾರೆ. ಆರೋಗ್ಯ ಸಮಸ್ಯೆ ಇರುವವರನ್ನು ಗುರುತಿಸಿ, ಕ್ಲಿನಿಕ್‌ಗೆ ಬರುವಂತೆ ಸೂಚಿಸುತ್ತಾರೆ. ದಿನಕ್ಕೆ 30ರಿಂದ 50 ಮಂದಿ ರೋಗಿಗಳು ಈ ಕ್ಲಿನಿಕ್‌ಗೆ ಬರುತ್ತಿದ್ದಾರೆ' ಎನ್ನುತ್ತಾರೆ ಬಯೋಕಾನ್ ಫೌಂಡೇಷನ್‌ನ ಮುಖ್ಯಸ್ಥೆ ರಾಣಿ ದೇಸಾಯಿ.

ಗ್ರಾಮದ ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ 964 ಮನೆಗಳಿಗೆ ಟಾಯ್ಲೆಟ್‌ಗಳನ್ನು ಫೌಂಡೇಷನ್ ವತಿಯಿಂದ ಕಟ್ಟಿಸಿಕೊಟ್ಟಿದ್ದಾರೆ.

'ಜ್ವರ, ಕೆಮ್ಮು, ಅಸ್ತಮಾ, ಮಧುಮೇಹ ಸೇರಿದಂತೆ ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಬರುತ್ತಾರೆ. ಅಲ್ಲದೇ ಸ್ತ್ರೀ ಸಂಬಂಧಿ ಸಮಸ್ಯೆಗಳಿಗೂ ಚಿಕಿತ್ಸೆ ನೀಡಿದ್ದೇನೆ' ಎನ್ನುತ್ತಾರೆ ವೈದ್ಯೆ ರೀಮಾ ಗಿರೀಶನ್.

ಹುಸ್ಕೂರು ಮಾತ್ರವಲ್ಲದೇ ಅಸ್ಸಿನ್‌ಟೌನ್, ಹೆನ್ನಗರ, ಚಿಕ್ಕತಿರುಪತಿ, ಕಲ್ಯಂಟಿ, ಚಿಕ್ಕಬಳ್ಳಾಪುರ, ಬಾಗಲಕೋಟೆ, ಉತ್ತರ ಕನ್ನಡ ಹಾಗೂ ಬಾದಾಮಿ ತಾಲ್ಲೂಕಿನಲ್ಲೂ ಆರೋಗ್ಯ ರಕ್ಷಾ ಯೋಜನೆಯಡಿ ಕ್ಲಿನಿಕ್‌ಗಳನ್ನು ನಡೆಸುತ್ತಿದ್ದಾರೆ.

'ಹುಸ್ಕೂರಿನಲ್ಲಿ 5600 ಜನರಿದ್ದಾರೆ. ಎಲ್ಲಿ ಆರೋಗ್ಯ ಸೇವೆಯ ಅಗತ್ಯವಿದೆ, ಕ್ಲಿನಿಕ್‌ಗಳಿಲ್ಲದೇ ಜನ ಪರದಾಡುತ್ತಿದ್ದಾರೆ ಎಂಬುದನ್ನು ನೋಡುತ್ತೇವೆ. ಜೊತೆಗೆ ಆ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಕಂಪೆನಿಗೆ ಮನವಿ ಮಾಡಿಕೊಳ್ಳಬೇಕು. ಆಗ ಕ್ಲಿನಿಕ್ ಆರಂಭಿಸುತ್ತೇವೆ. ಇಲ್ಲಿ ವಿತರಿಸುವ ಔಷಧಗಳ ಮೇಲೆ ಶೇ 25 ರಷ್ಟು ರಿಯಾಯ್ತಿ ನೀಡುತ್ತೇವೆ. ಫೌಂಡೇಷನ್‌ನ ಜೀವ ವಿಮೆ ಕಾರ್ಡ್ ಮಾಡಿಸಿದವರಿಗೆ ಉಚಿತ ಚಿಕಿತ್ಸೆಯಿದೆ' ಎಂದು ಮಾಹಿತಿ ನೀಡುತ್ತಾರೆ ರಾಣಿ ದೇಸಾಯಿ.

### ಉಚಿತ ಶಿಬಿರಗಳು

ತಿಂಗಳ 2ನೇ ಬುಧವಾರ ಸರ್ವೈಕಲ್, ಸ್ತನ ಕ್ಯಾನ್ಸರ್ ಪತ್ತೆಯ ಸ್ಕ್ಯಾನಿಂಗ್ ಶಬಿರ ಮತ್ತು ಕೊನೆ ಶನಿವಾರ ಮಧುಮೇಹ ತಪಾಸಣಾ ಶಿಬಿರವನ್ನೂ ಆಯೋಜಿಸಲಾಗುತ್ತದೆ. 250ಕ್ಕೂ ಹೆಚ್ಚಿನ ಮಧುಮೇಹಿಗಳು ಶಿಬಿರದ ಪ್ರಯೋಜನ ಪಡೆದುಕೊಂಡಿದ್ದಾರೆ.

'ನಮ್ಮೂರಿನಲ್ಲಿ ಈ ಆಸ್ಪತ್ರೆ ಆಗಿರುವುದರಿಂದ ಬಹಳ ಅನುಕೂಲ ಆಗಿದೆ. ಈ ಆಸ್ಪತ್ರೆ ಇಲ್ಲದಿದ್ದರೆ ಚಂದಾಪುರ, ಸಿಂಗಸಂದ್ರಕ್ಕೆ ಹೋಗಬೇಕಿತ್ತು. ಇಲ್ಲಿ ಸರಿಯಾಗಿ ಬಸ್ ಸೌಲಭ್ಯವೂ ಇಲ್ಲ. ಈ ಕ್ಲಿನಿಕ್ 24ಗಂಟೆ ತೆರೆದಿದ್ದರೆ ಇನ್ನೂ ಹೆಚ್ಚಿನ ಅನುಕೂಲ ಆಗುತ್ತಿತ್ತು. ರಾತ್ರಿ ವೇಳೆ ಏನಾದರೂ ತೊಂದರೆಯಾದರೆ ಹತ್ತಿರದಲ್ಲಿ ಆಸ್ಪತ್ರೆಗಳಿಲ್ಲ' ಎನ್ನುತ್ತಾರೆ ಗ್ರಾಮದ ನಮಿತಾ.

ಗ್ರಾಮದಲ್ಲಿ ಕ್ಲಿನಿಕ್ ಅಲ್ಲದೇ ಸಾರ್ವಜನಿಕ ಶೌಚಾಲಯ, ಶುದ್ಧ ಕುಡಿಯುವ ನೀರಿನ ಘಟಕವನ್ನೂ ಕಟ್ಟಿಸಿಕೊಟ್ಟಿದ್ದಾರೆ. ನೀರಿನ ಘಟಕಕ್ಕೆ ತಿಂಗಳಿಗೆ ₹15 ಸಾವಿರ ಹಾಗೂ ಕ್ಲಿನಿಕ್ ನಿರ್ವಹಣೆಗೆ ತಿಂಗಳಿಗೆ ₹1.5 ಲಕ್ಷ ಖರ್ಚಾಗುತ್ತಿದೆಯಂತೆ.



ಡಾ. ರೀಮಾ ಗಿರೀಶನ್